ಈ ಲೇಖನದ ವಿಷಯಾನುಕ್ರಮಣಿಕೆ


ನಾಗರ ಚೌತಿ ಮತ್ತು ಪಂಚಮಿಯ ಆಚರಣೆ ಎಂದು? 2

27 ಗುರುವಾರ ಚೌತಿ, 28 ಶುಕ್ರವಾರ ಪಂಚಮಿ 3

ನಾಗರಚೌತಿಗೆ ತೃತೀಯಾವೇಧ ಇರಬಾರದು 4

ಗಣೇಶಚತುರ್ಥಿಗೆ ತೃತೀಯಾವೇಧ ಶ್ರೇಷ್ಠ 7

ನಾಗರ ಚೌತಿ ಮಧ್ಯಾಹ್ನವ್ಯಾಪಿನಿಯಾಗಿರಬೇಕು 9

ನಾಗರಚತುರ್ಥಿಗೆ ಪಂಚಮೀವೇಧ ಶ್ರೇಷ್ಠ 9

ಈ ಬಾರಿಯ ಪರಿಸ್ಥಿತಿ 11

ಗುಣವಿದ್ದರೂ ದೋಷವಿದ್ದರೆ ತಿಥಿ ತ್ಯಾಜ್ಯ 13

ಮುಖ್ಯಕಾಲ ದೊರೆಯದಿದ್ದರೆ ಗೌಣಕಾಲದಲ್ಲಿ ಮಾಡಬೇಕು 15

ಉದಾಹರಣೆಗಳು 18

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 96

## ನಾಗರ ಚೌತಿ ಮತ್ತು ಪಂಚಮಿಯ ಆಚರಣೆ ಎಂದು?

ನಾಗಚತುರ್ಥಿ, ನಾಗಪಂಚಮಿ ಯಾವಾಗ ಮಾಡಬೇಕು.

ಕೆಲವರು ಬುಧ-ಗುರುವಾರ ಅಂತ, ಕೆಲವರು ಗುರು-ಶುಕ್ರವಾರ ಅಂತ ಹೇಳಿದರು.

ದಯವಿಟ್ಟು ತಿಳಿಸಿ.

– ಜನಾರ್ದನ್. ತಿರುಪತಿ.

## 27 ಗುರುವಾರ ಚೌತಿ, 28 ಶುಕ್ರವಾರ ಪಂಚಮಿ

ಹೇಮಲಂಬ ಸಂವತ್ಸರದ ನಾಗರ ಚತುರ್ಥಿಯ ಅಚರಣೆ ಧರ್ಮಶಾಸ್ತ್ರದ ಅಧ್ಯಯನ-ಸಂಶೋಧನೆ-ನಿರ್ಣಯಗಳಿಗೆ ಅತ್ಯುತ್ತಮವಾದ ಅವಕಾಶವನ್ನು ನೀಡಿದೆ.  ಮುಂದೆ ವಿವರಿಸುವ ಎಲ್ಲ ಚರ್ಚೆ ಮತ್ತು ನಿರ್ಣಯದ ಅನುಸಾರವಾಗಿ ಜುಲೈ 26ನೆಯ ತಾರೀಕು ಸರ್ವಥಾ ನಾಗರಚೌತಿಯನ್ನು ಮಾಡಬಾರದು. 27 ನಾಗರಚೌತಿಯ ಆಚರಣೆ ಮತ್ತು  28ನೆಯ ತಾರೀಕು ಪಂಚಮಿಯ ಆಚರಣೆಯನ್ನು ಮಾಡಬೇಕು.

ಚತುರ್ಥೀತಿಥಿಗೆ ಅಭಿಮಾನಿಯಾದ ಗಣಪತಿಯನ್ನು, ಪಂಚಮೀ ತಿಥಿಗೆ ಅಭಿಮಾನಿಗಳಾದ ಮತ್ತು ನಾಗರಚೌತಿಯಂದು ಪೂಜಿಸಲ್ಪಡಬೇಕಾದ ಶೇಷ-ಸುಬ್ರಹ್ಮಣ್ಯ-ವಾಸುಕಿ ಮುಂತಾದ ಸಮಸ್ತ ಸರ್ಪದೇವತೆಗಳನ್ನು ಭಕ್ತಿಯಿಂದ ನೆನದು ತತ್ವವನ್ನು ತಿಳಿಯಲು ಆರಂಭಿಸೋಣ.

## ನಾಗರಚೌತಿಗೆ ತೃತೀಯಾವೇಧ ಇರಬಾರದು

ಶ್ರಾವಣಮಾಸದ ಶುಕ್ಲಪಕ್ಷದ ಚತುರ್ಥಿಯಂದು ಸತ್ಸಂತಾನದ ಅಪೇಕ್ಷೆ, ಮಕ್ಕಳ ಅಭಿವೃದ್ಧಿ, ದಾಪಂತ್ಯದಲ್ಲಿ ಉತ್ತಮ ಶಯನಸುಖ, ಮತ್ತು ಸಂಪತ್ತಿನ ಅಭಿವೃದ್ಧಿಯ ಅಪೇಕ್ಷೆ ಇರುವವರು ಉಪವಾಸವನ್ನು ಮಾಡಬೇಕು[1]. ಮತ್ತು ಮಧ್ಯಾಹ್ನದ ಸಮಯದಲ್ಲಿ ಪ್ರತಿಯೊಬ್ಬರೂ ಸರ್ಪಗಳಿಗೆ ಹಾಲೆರೆಯಬೇಕು.

ಯಾವುದೇ ವ್ರತ-ಪೂಜೆಯ ಅನುಷ್ಠಾನವನ್ನು ಯಾವ ತಿಥಿಯಲ್ಲಿ ಮಾಡಬೇಕು ಎಂದು ತಿಳಿಸುವ ಧರ್ಮಶಾಸ್ತ್ರಗಳು ಆ ತಿಥಿಗಳ ಸ್ವರೂಪವನ್ನೂ ತಿಳಿಸುತ್ತವೆ. ಚತುರ್ಥಿಯಂದು ಉಪವಾಸವನ್ನು ಮಾಡಬೇಕಾದರೆ ಚತುರ್ಥೀತಿಥಿಯು ಸರ್ವಥಾ

---

[1] ವಿವರಗಳನ್ನು ನಾಗರಚೌತಿ ಪಂಚಮಗಳ ಆಚರಣೆಯ ವಿವರವನ್ನು VNA102 ನೇ ಲೇಖನದಲ್ಲಿ ನೀಡಿದ್ದೇನೆ. ನಾಗರ ಚೌತಿಯ ಉಪವಾಸ ಏಕಾದಶಿಯ ಉಪವಾಸದಂತೆ 'ನಿತ್ಯಕರ್ಮ'ವಲ್ಲ. ಅಂದರೆ, ಮಾಡಲೇಬೇಕು ಎಂಬ ನಿರ್ಬಂಧವಿಲ್ಲ. ಅದು ವಿಷ್ಣುಪಂಚಕದ ಉಪವಾಸದಂತೆ. ಆದರೆ ವಿಷ್ಣುಪ್ರೀತ್ಯರ್ಥವಾಗಿ ಮಾಡಿದಲ್ಲಿ ನಿಷ್ಕಾಮ ಮತ್ತು ಮೇಲೆ ಹೇಳಿದ ಅಭೀಷ್ಟಗಳ ಪ್ರಾಪ್ತಿಗಾಗಿ ಮಾಡಿದರೆ ಸಕಾಮಕರ್ಮವಾಗುತ್ತದೆ.

ತೃತೀಯಾತಿಥಿಯ ವೇಧವನ್ನು ಪಡೆದಿರಬಾರದು. ಪಂಚಮೀತಿಥಿಯ ಸಂಪರ್ಕವನ್ನು ಪಡೆದಿರಬೇಕು.

ಈ ತತ್ವವನ್ನು ವೃದ್ಧವಸಿಷ್ಠರು ನಿರ್ಣಯಿಸಿದ್ದಾರೆ —

**ಏಕಾದಶೀ ತಥಾ ಷಷ್ಠೀ**
**ಆಮಾವಾಸ್ಯಾ ಚತುರ್ಥಿಕಾ ।**
**ಉಪೋಷ್ಯಾಃ ಪರಸಂಯುಕ್ತಾಃ**
**ಪರಾಃ ಪೂರ್ವೇಣ ಸಂಯುತಾಃ** ಎಂದು.

ಏಕಾದಶೀ, ಷಷ್ಠೀ, ಅಮಾವಾಸ್ಯಾ, ಚತುರ್ಥೀ ತಿಥಿಗಳಂದು ಉಪವಾಸ ಮಾಡಬೇಕಾದರೆ ಆ ತಿಥಿಗಳು ಅದರ ಮುಂದಿನ ತಿಥಿಯ ಸಂಪರ್ಕವನ್ನು ಪಡೆದಿರಬೇಕು. ಉಳಿದ ತಿಥಿಗಳಲ್ಲಿ ಉಪವಾಸವನ್ನು ಮಾಡಬೇಕಾದರೆ ಆ ತಿಥಿಗಳು ಹಿಂದಿನ ತಿಥಿಯ ಸಂಪರ್ಕವನ್ನು ಪಡೆದಿರಬೇಕು.

ಮತ್ತು, ಯಾವ ವೇಧ ಫಲಪ್ರದವಾದದ್ದು ಯಾವ ವೇಧ ಮಹಾದೋಷಪ್ರದವಾದದ್ದು ಎಂದು ನಿರ್ಣಯಿಸುವ, ಎಲ್ಲ ಧರ್ಮಶಾಸ್ತ್ರಜ್ಞರೂ

ಒಕ್ಕೊರಲಿನಿಂದ ಒಪ್ಪಿರುವ ನಿಗಮದ ಒಂದು ಸೂತ್ರ ಹೀಗಿದೆ —

**ಯುಗ್ಮಾಗ್ನಿ-ಯುಗಭೂತಾನಾಂ**
**ಷಣ್ಮುನ್ಯೋಃ ವಸುರಂಧ್ರಯೋಃ**
**ರುದ್ರೇಣ ದ್ವಾದಶೀಯುಕ್ತಾ[2]**
**ಚತುರ್ದಶ್ಯಾ ಚ ಪೂರ್ಣಿಮಾ**
**ಪ್ರತಿಪದ್ಯಪ್ಯಮಾವಾಸ್ಯಾ**
**ತಿಥ್ಯೋರ್ಯುಗ್ಮಂ ಮಹಾಫಲಮ್**
**ಏತದ್ ವ್ಯಸ್ತಂ ಮಹಾದೋಷಂ**
**ಹಂತಿ ಪುಣ್ಯಂ ಪುರಾಕೃತಮ್**

ಚತುರ್ಥೀಗೆ ಪಂಚಮೀಸಂಪರ್ಕವಿರಬೇಕು.
**ಚತುರ್ಥಿಗೆ ತೃತೀಯಾ ವೇಧವಿರಬಾರದು[3].**

---

[2] ಯುಗ್ಮ ಎಂದರೆ ದ್ವಿತೀಯಾ. ಅಗ್ನಿ ಎಂದರೆ ತೃತೀಯಾ. ಯುಗ ಎಂದರೆ ಚತುರ್ಥೀ. ಭೂತ ಎಂದರೆ ಪಂಚಮೀ. ಷಟ್ ಎಂದರೆ ಷಷ್ಠೀ. ಮುನಿ ಎಂದರೆ ಸಪ್ತಮೀ. ವಸು ಎಂದರೆ ಅಷ್ಟಮೀ. ರಂಧ್ರ ಎಂದರೆ ನವಮೀ. ರುದ್ರ ಎಂದರೆ ಏಕಾದಶೀ.

[3] ಆದರೆ ಭಾದ್ರಪದಶುದ್ಧ ಚತುರ್ಥಿಗೆ ಮಾತ್ರ ಅಪವಾದವಿದೆ. ಗಣೇಶಚತುರ್ಥಿಗೆ ಗೌರೀತೃತೀಯಾದ ವೇಧ ಶ್ರೇಷ್ಠವಾದದ್ದು. ನಿಷೇಧಗೊಂಡು ಮತ್ತು ವಿಹಿತವಾಗಿದೆ. ಇದನ್ನು ಪ್ರತಿಪ್ರಸವ ಎನ್ನುತ್ತಾರೆ. ಮುಂದೆ ವಿವರಿಸುತ್ತೇನೆ.

ಹೀಗೆ, ಈ ಎರಡು ವಾಕ್ಯಗಳಿಂದ ತೃತೀಯಾ ಯುಕ್ತವಾದ ಚತುರ್ಥಿಯಂದು ಉಪವಾಸ ಮಾಡಬಾರದು ಎನ್ನುವದು ಸಿದ್ಧವಾಗುತ್ತದೆ.

## ಗಣೇಶಚತುರ್ಥಿಗೆ ತೃತೀಯಾವೇಧ ಶ್ರೇಷ್ಠ

ಭಾದ್ರಪದ ಮಾಸದ ಗಣೇಶಚತುರ್ಥಿಗೆ ಮಾತ್ರ ತೃತೀಯಾತಿಥಿಯ ವೇಧ ಮಹಾಫಲಪ್ರದವಾದದ್ದು. ಕಾರಣ, ತೃತೀಯಾ ತಿಥಿಗೆ ಅಭಿಮಾನಿನೀ ಗೌರೀದೇವಿ. ಹೀಗಾಗಿ ಮಾತೃತಿಥಿಯ ಸಂಪರ್ಕ ಪಡೆದ ಚತುರ್ಥೀ ತಿಥಿ ಗಣಪತಿಯ ಪೂಜೆಗೆ ಶ್ರೇಷ್ಠ ಎಂದು ಬೃಹಸ್ಪತ್ಯಾಚಾರ್ಯರು ತಿಳಿಸುತ್ತಾರೆ —

**ಚತುರ್ಥೀ ಗಣನಾಥಸ್ಯ**
**ಮಾತೃವಿದ್ಧಾ ಪ್ರಶಸ್ಯತೇ**

ಶ್ರೀ ಆಪಸ್ತಂಬ ಮಹರ್ಷಿಗಳೂ ಸಹ ಗಣೇಶಚತುರ್ಥಿಗೆ ತೃತೀಯಾವೇಧ ಶ್ರೇಷ್ಠ ಎಂದು ನಿರ್ಣಯಿಸಿದ್ದಾರೆ —

**ಚತುರ್ಥೀ ಚ ತೃತೀಯಾಯಾಂ**

**ಮಹಾಪುಣ್ಯಫಲಪ್ರದಾ।**
**ಕರ್ತವ್ಯಾ ವ್ರತಿಭಿರ್ವತ್ಸ**
**ಗಣನಾಥಸುತೋಷಿಣೀ ।**

ಪಂಚಮೀತಿಥಿಗೆ ಅಭಿಮಾನಿಗಳು ಸರ್ಪಗಳು. ಹೀಗಾಗಿ ಪಂಚಮಿಯ ಸಂಪರ್ಕ ಪಡೆದ ಚತುರ್ಥಿಯಂದೇ ನಾಗರಚೌತಿಯ ಆಚರಣೆ ಎಂದು ಧರ್ಮಶಾಸ್ತ್ರಜ್ಞರು ತಿಳಿಸುತ್ತಾರೆ — **ಪಂಚಮ್ಯಾ ನಾಗತಿಥಿತ್ವೇನ ತದ್ಯೋಗಸ್ಯ ಪ್ರಾಶಸ್ತ್ಯಾತ್** ಎಂದು.

ಹೀಗಾಗಿ ನಾಗರಚೌತಿಯಂದು ಉಪವಾಸದ ವಿಧಿ ಇರುವದರಿಂದ ಮತ್ತು ತೃತೀಯಾವೇಧ ನಿಷಿದ್ಧ. ಪಂಚಮೀ ವೇಧ ಶ್ರೇಷ್ಠವಾದದ್ದು.

ಗಣೇಶಚೌತಿಯಂದು ಉಪವಾಸದ ವಿಧಿಯಿಲ್ಲವಾದ್ದರಿಂದ ಮತ್ತು ನಿಷಿದ್ಧವಾದ ತೃತೀಯಾವೇಧವನ್ನು ಮತ್ತೆ ವಿಧಿಸಿರುವದರಿಂದ ಅಲ್ಲಿ ತೃತೀಯಾವೇಧವನ್ನು ಗ್ರಹಿಸಬೇಕು.

ಇವಿಷ್ಟು ಒಂದು ವಿಷಯ.

## ನಾಗರ ಚೌತಿ ಮಧ್ಯಾಹ್ನವ್ಯಾಪಿನಿಯಾಗಿರಬೇಕು

ಎರಡನೆಯ ವಿಷಯ. ನಾಗರಚೌತಿಯಾಗಲೀ ಗಣೇಶಚತುರ್ಥಿಯಾಗಲೀ ಎರಡೂ ಸಹ ಮಧ್ಯಾಹ್ನವ್ಯಾಪಿನಿಯಾಗಿರಬೇಕು ಎಂದು ಧರ್ಮಶಾಸ್ತ್ರಗಳು ತಿಳಿಸುತ್ತವೆ.

> **ಯುಗಂ ಮಧ್ಯಂದಿನೇ ಯತ್ರ**
> **ತತ್ರೋಪೋಷ್ಯ ಫಣೀಶ್ವರಾನ್**
> **ಕ್ಷೀರೇಣಾಪ್ಯಾಯ್ಯ ಪಂಚಮ್ಯಾಂ**
> **ಪಾರಯೇತ್ ಪ್ರಯತೋ ನರಃ**

ಯುಗ ಎಂದರೆ ಚತುರ್ಥೀ. ಯಾವ ದಿವಸ ಮಧ್ಯಾಹ್ನಕಾಲದಲ್ಲಿ ಚತುರ್ಥಿ ಇದೆಯೋ ಆ ದಿವಸ ಉಪವಾಸ ಮಾಡಿ, ಸರ್ಪದೇವತೆಗಳಿಗೆ ಹಾಲೆರೆದು ಪಂಚಮಿಯಂದು ಪಾರಣೆ ಮಾಡಬೇಕು.

## ನಾಗರಚತುರ್ಥಿಗೆ ಪಂಚಮೀವೇಧ ಶ್ರೇಷ್ಠ

ಮೇಲೇ ತಿಳಿಸಿದ ನಿಗಮದ ಯುಗ್ಮವಾಕ್ಯದಲ್ಲಿ ನಾಗ-ಭೂತತಿಥಿಗಳ ಯುಗ್ಮವನ್ನು ಹೇಳಿದ್ದಾರೆ.

ನಾಗ ಎಂದರೆ ಚತುರ್ಥಿ. ಭೂತ ಎಂದರೆ ಪಂಚಮಿ. ಪಂಚಮೀಸಂಪರ್ಕವಿರುವ ಚತುರ್ಥಿ ಶ್ರೇಷ್ಠ ಎಂದರ್ಥ.

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರ ಶಿಷ್ಯರಾದ ಶ್ರೀ ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು **ಅಥ ಚತುರ್ಥೀನಿರ್ಣಯಃ, ಅತ್ರ ಯುಗ್ಮಾದಿವಾಕ್ಯಾತ್ ಪರವಿದ್ಧೈವ ಗ್ರಾಹ್ಯಾ** ಎಂದು ವಿಸ್ತಾರವಾಗಿ ಚರ್ಚೆ ಮಾಡಿ ನಿರ್ಣಯಿಸಿದ್ದಾರೆ.

ಹೀಗಾಗಿ, ನಾಗರಚೌತಿಯನ್ನು ಆಚರಿಸಬೇಕಾದರೆ

1. ಚತುರ್ಥಿ ಮಧ್ಯಾಹ್ನವ್ಯಾಪಿನಿಯಾಗಿರಬೇಕು. ಅಂದರೆ ಮಧ್ಯಾಹ್ನಕಾಲದಲ್ಲಿ ಚತುರ್ಥಿ ಇರಬೇಕು.

2. ಚತುರ್ಥೀ ಸರ್ವಥಾ ತೃತೀಯಾತಿಥಿಯಿಂದ ಕೂಡಿರಬಾರದು. ತೃತೀಯಾವಿದ್ಧವಾದ ಚತುರ್ಥಿಯಂದು ನಾಗರಚೌತಿಯನ್ನು ಆಚರಿಸಿದರೆ ಹಿಂದೆ ಮಾಡಿದ ಪುಣ್ಯಗಳು ನಾಶವಾಗುತ್ತವೆ. (ಮೇಲಿನ ನಿಗಮದ ಯುಗ್ಮವಾಕ್ಯದಲ್ಲಿ ಈ ಮಾತಿದೆ, ಗಮನಿಸಿ.)

3. ಚತುರ್ಥಿಗೆ ಪಂಚಮಿಯ ಸಂಪರ್ಕವಿರಬೇಕು. ಅದು ಮಹಾಫಲಪ್ರದ.

4. ಎಲ್ಲ ವ್ರತಾನುಷ್ಠಾನಗಳ ಆಚರಣೆಗಿರುವಂತೆ ಸೂರ್ಯೋದಯದಲ್ಲಿ ತಿಥಿ ಇದ್ದರೆ ಪ್ರಶಸ್ತ.

## ಈ ಬಾರಿಯ ಪರಿಸ್ಥಿತಿ

ಹೀಗೆ ನಾಗರಚೌತಿಗೆ ನಾಲ್ಕು ನಿಯಮಗಳು. ಆದರೆ ಈ ಹೇಮಲಂಬದ ಶ್ರಾವಣದಲ್ಲಿ ವಿಚಿತ್ರವಾದ ಪರಿಸ್ಥಿತಿ ಬಂದೊದಗಿದೆ.

26ನೆಯ ತಾರೀಕು ಬುಧವಾರದಂದು ಚತುರ್ಥೀತಿಥಿ ಬೆಳಿಗ್ಗೆ ಹತ್ತೂ ಮುಕ್ಕಾಲರ ಸುಮಾರಿಗೆ ಆರಂಭವಾಗಿ 27ನೆಯ ತಾರೀಕು ಬೆಳಿಗ್ಗೆ ಒಂಭತ್ತು ಮುಕ್ಕಾಲರ ವೇಳೆಗೆ ಮುಗಿಯುತ್ತದೆ.

ಅಂದರೆ 26ನೆಯ ತಾರೀಕು ಹತ್ತೂ ಮುಕ್ಕಾಲರವರೆಗೆ ತೃತೀಯಾ ಇರುವದರಿಂದ ತೃತೀಯಾತಿಥಿಯ ವೇಧ ಚತುರ್ಥಿಗಿದೆ.

27ನೆಯ ತಾರೀಕಿನ ಚತುರ್ಥಿ ಪಂಚಮೀಯುಕ್ತವಾಗಿದೆ.
ಆದರೆ ಚತುರ್ಥಿ ಮಧ್ಯಾಹ್ನವ್ಯಾಪಿನಿಯಾಗಿರುವದು 26ನೆಯ ತಾರೀಕು. 27 ಮಧ್ಯಾಹ್ನವ್ಯಾಪಿನಿಯಾಗಿಲ್ಲ.

ಅಂದರೆ, 26ನೆಯ ತಾರೀಕು

1. ತೃತೀಯಾವೇಧ ಎಂಬ ದೋಷವಿದೆ.
2. ಮಧ್ಯಾಹ್ನವ್ಯಾಪಿತ್ವ ಎಂಬ ಗುಣವೂ ಇದೆ.
3. ಪಂಚಮೀವೇಧವಿಂಬ ಗುಣವಿಲ್ಲ.
4. ಸೂರ್ಯೋದಯತಿಥಿ ಎಂಬ ಗುಣವಿಲ್ಲ.

27ನೆಯ ತಾರೀಕು

1. ತೃತೀಯಾವೇಧ ಎಂಬ ದೋಷವಿಲ್ಲ.
2. ಮಧ್ಯಾಹ್ನವ್ಯಾಪಿತ್ವ ಎಂಬ ಗುಣವಿಲ್ಲ.
3. ಪಂಚಮೀವೇಧವೆಂಬ ಗುಣವಿದೆ.

4. ಸೂರ್ಯೋದಯತಿಥಿ ಎಂಬ ಗುಣವಿದೆ.

ಈಗ ಎಂದು ಮಾಡಬೇಕು ಎನ್ನುವದು ಪ್ರಶ್ನೆ.

## ಗುಣವಿದ್ದರೂ ದೋಷವಿದ್ದರೆ ತಿಥಿ ತ್ಯಾಜ್ಯ

ಇಂತಹ ಸಂದರ್ಭಗಳಲ್ಲಿ ಗುಣವಿದ್ದರೂ ದೋಷಯುಕ್ತವಾದುದನ್ನು ಬಿಡಬೇಕು ಎನ್ನುವದು ಧರ್ಮಶಾಸ್ತ್ರಗಳ ನಿರ್ಣಯ.

**ಘಟಿಕಾರ್ಧಂ ವಿಭಾಗಂ ವಾ**
**ಸ್ವಲ್ಪಂ ವಾ ದೂಷಯೇತ್ ತಿಥಿಮ್ ।**
**ಪಂಚಗವ್ಯಘಟಂ ಪೂರ್ಣಂ**
**ಸುರಾಯಾ ಬಿಂದುಕೋ ಯಥಾ ।**

"ನಿಷಿದ್ಧ ತಿಥಿಯ ಸಂಪರ್ಕ ಸ್ವಲ್ಪವಿದ್ದರೂ ತಿಥಿಗೆ ದೋಷವುಂಟಾಗುತ್ತದೆ. ಪಾಪನಾಶಕವಾದ ಪಂಚಗವ್ಯದಿಂದ ತುಂಬಿದ ಕಲಶದಲ್ಲಿ ಒಂದು ಹೆಂಡದ ಬಿಂದುವಿದ್ದರೂ ದೋಷಬರುವಂತೆ"

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರೂ ಸಹ ಕೃಷ್ಣಾಮೃತಮಹಾರ್ಣವಗ್ರಂಥದಲ್ಲಿ —

**ಕಲಾವೇಧೇಪಿ ವಿಪ್ರೇಂದ್ರ**
**ದಶಮ್ಯೇಕಾದಶೀಂ ತ್ಯಜೇತ್।**
**ಸುರಾಯಾ ಬಿಂದುನಾ ಸ್ಪೃಷ್ಟಂ**
**ಗಂಗಾಂಭ ಇವ ಸಂತ್ಯಜೇತ್ ।**

ಎಂದು ಹೆಂಡದ  ಒಂದು ಹನಿಯ ಸಂಪರ್ಕವಿದ್ದರೂ ಕಲಶದಲ್ಲಿನ ಗಂಗೆಯನ್ನು ನಾವು ತ್ಯಜಿಸುವಂತೆ ದಶಮಿಯ ಒಂದು ಕಲಾಮಾತ್ರ ಸ್ಪರ್ಶವಿದ್ದರೂ ಏಕಾದಶಿಯನ್ನು ಬಿಡಬೇಕು ಎಂದು ಹೇಳಿದ್ದಾರೆ.

ಮತ್ತು, ನಮ್ಮ ಮಾಧ್ವರಲ್ಲಿ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ. ದಶಮೀವೇಧವಿರುವ ಏಕಾದಶಿಯಂದು ನಾವು ಸರ್ವಥಾ ಉಪವಾಸವನ್ನು ಆಚರಿಸುವದಿಲ್ಲ.

**ಅದೇ ರೀತಿ 26ನೆಯ ತಾರೀಕು ಚತುರ್ಥಿ ಮಧ್ಯಾಹ್ನವ್ಯಾಪಿನಿಯಾಗಿದ್ದರೂ ಆ ದಿವಸ ತೃತೀಯಾವೇಧವಿರುವದರಿಂದ, ನಾಗರಚೌತಿಗೆ ತೃತೀಯಾವೇಧ ದೋಷಕರವಾದ್ದರಿಂದ ಸರ್ವಥಾ 26ರಂದು ನಾಗರಚೌತಿಯನ್ನು ಮಾಡಬಾರದು.**

## ಮುಖ್ಯಕಾಲ ದೊರೆಯದಿದ್ದರೆ ಗೌಣಕಾಲದಲ್ಲಿ ಮಾಡಬೇಕು

ಹಾಗಾದರೆ, 27ನೆಯ ತಾರೀಕು ಬೆಳಿಗ್ಗೆ 9-45 ರ ಸುಮಾರಿಗೆ ಚತುರ್ಥಿ ಮುಗಿದುಬಿಡುವದರಿಂದ ಚತುರ್ಥಿ ಮಧ್ಯಾಹ್ನವ್ಯಾಪಿನಿಯಾಗಿಲ್ಲ. ಅಂದ ಮೇಲೆ ಆ ದಿವಸ ಹೇಗೆ ಚತುರ್ಥಿಯನ್ನು ಮಾಡುವದು ಎಂದು ಪ್ರಶ್ನೆ.

ಉತ್ತರ ಹೀಗಿದೆ —

ನಾಗರ ಚೌತಿಯ ಆಚರಣೆಗೆ ಮುಖ್ಯಕಾಲ ಮಧ್ಯಾಹ್ನ. ಸಂಶಯವಿಲ್ಲ. ಆ ಕಾಲದಲ್ಲಿ ಚತುರ್ಥಿ ಇರಬೇಕು[4].

26ನೆಯ ತಾರೀಕು ಮಾತ್ರ ಚತುರ್ಥಿ ಮಧ್ಯಾಹ್ನವ್ಯಾಪಿನಿಯಾಗಿದ್ದರೂ ತೃತೀಯಾವೇಧವಿರುವದರಿಂದ ಮಹಾದೋಷ. ಮಾಡುವಂತಿಲ್ಲ.

---

[4] ಎರಡು ದಿವಸಗಳಲ್ಲಿ ಮಧ್ಯಾಹ್ನಕಾಲದಲ್ಲಿ ಚತುರ್ಥಿ ಇದ್ದಾಗ ಮಾರನೆಯ ದಿವಸದ ಚತುರ್ಥಿಯನ್ನೇ ಗ್ರಹಿಸಬೇಕು, ಕಾರಣ ಪಂಚಮಿಯ ವೇಧವಿರುತ್ತದೆ.

27ನೆಯ ತಾರೀಕು ಮಧ್ಯಾಹ್ನವ್ಯಾಪಿನಿಯಾಗದೇ ಇದ್ದರೂ, ಸೂರ್ಯೋದಯಕಾಲದಲ್ಲಿ ಮತ್ತು ಸೂರ್ಯೋದಯದ ನಂತರ ನಾಲ್ಕು ಮುಹೂರ್ತಕ್ಕೂ ಹೆಚ್ಚಿನ ಕಾಲ ಚತುರ್ಥಿ ಇರುವದರಿಂದ ನಾವು 27ನೆಯ ತಾರೀಕಿನಂದೇ ನಾಗಚತುರ್ಥಿಯನ್ನು ಆಚರಿಸಬೇಕು.

ಇಂತಹ ಸಂದರ್ಭಗಳಲ್ಲಿ ಉದಯಕಾಲದಲ್ಲಿ ಸ್ವಲ್ಪ ಹೊತ್ತಾದರೂ ತಿಥಿಯಿದ್ದಲ್ಲಿ ಅದನ್ನು ಪೂರ್ಣ ಎಂದು ಗ್ರಹಿಸಬೇಕು ಎಂದು ಬೋಧಾಯನರು ತಿಳಿಸುತ್ತಾರೆ —

**ವ್ರತೋಪವಾಸನಿಯಮೇ**
**ಘಟಿಕೈಕಾಪಿ ಯಾ ಭವೇತ್ ।**
**ಉದಯೇ ಸಾ ತಿಥಿರ್ಗ್ರಾಹ್ಯಾ**
**ವಿಪರೀತಾ ತು ಪೈತೃಕೇ ।।**

**ಅದಿತ್ಯೋದಯವೇಲಾಯಾಂ**
**ಯಾಲ್ಪಾಪಿ ಚ ತಿಥಿರ್ಭವೇತ್ ।**
**ಪೂರ್ಣಾ ಇತ್ಯೇವ ಮಂತವ್ಯಾ**

## ಪ್ರಸೂತಾ ಚೋದಯಂ ವಿನಾ ||

ವ್ರತ ಉಪವಾಸಗಳನ್ನು ಮಾಡುವ ಒಂದು ಗಳಿಗೆಯಾದರೂ ಸೂರ್ಯೋದಯದಲ್ಲಿದ್ದರೆ ಆ ತಿಥಿ ಗ್ರಾಹ್ಯ.

ಸೂರ್ಯೋದಯದಲ್ಲಿ ಸ್ವಲ್ಪಹೊತ್ತಾದರೂ ಇರುವ ತಿಥಿ ಪೂರ್ಣ ಎಂದೇ ಕರೆಸಿಕೊಳ್ಳುತ್ತದೆ.

ಸೂರ್ಯೋದಯ, ಮಧ್ಯಾಹ್ನ, ಸೂರ್ಯಾಸ್ತ, ಮಧ್ಯರಾತ್ರಿಗಳಲ್ಲಿ ವ್ಯಾಪಿಸಿರುವ ತಿಥಿ ಸಂಪೂರ್ಣ ಎಂದು ವಚನವಿರುವಾಗ, ಉದಯಕಾಲ-ದಲ್ಲಾದರೂ ಇರುವ ತಿಥಿ ಪೂರ್ಣ ಎಂದು ಹೇಳುತ್ತಿರುವ ಈ ವಚನ ಆ ರೀತಿಯಾದ ಸಂಪೂರ್ಣ ತಿಥಿ ದೊರೆಯದೇ ಇದ್ದಾಗ ಈ ರೀತಿಯಾದ ಪೂರ್ಣ ತಿಥಿಯನ್ನು ಅನುಸರಿಸಬೇಕು ಎಂದು ತಿಳಿಸುತ್ತದೆ.

ಹೀಗಾಗಿ 27ನೆಯ ತಾರೀಕು ಮಧ್ಯಾಹ್ನವ್ಯಾಪಿನಿಯಾಗದೇ ಇದ್ದರೂ

ಸೂರ್ಯೋದಯಕಾಲದಲ್ಲಿ ಇರುವದರಿಂದ ನಾಗಚತುರ್ಥಿಯನ್ನು ಆಚರಿಸಬೇಕು.

## ಉದಾಹರಣೆಗಳು

ಮಧ್ಯಾಹ್ನವ್ಯಾಪಿನಿಯಾಗದೇ ಇದ್ದರೂ ಮಾಡಬಹುದೆ, ಮಾಡುವದಕ್ಕೆ ಪ್ರಮಾಣವಿದೆಯೆ ಎಂಬ ಪ್ರಶ್ನೆ ಉಳಿಯುತ್ತದೆ.

ಉತ್ತರಗಳು ಹೀಗಿವೆ —

ಹೌದು. ಅನಿವಾರ್ಯ ಸಂದರ್ಭಗಳಲ್ಲಿ ಮುಖ್ಯಕಾಲ, ಮುಖ್ಯ ತಿಥಿಗಳು ದೊರೆಯದೇ ಇದ್ದಾಗ ಗೌಣಕಾಲದಲ್ಲಿ ಮಾಡಬಹುದು. ದೋಷಕಾಲದಲ್ಲಿ ಮಾಡಬಾರದೇ ಹೊರತು ಗೌಣಕಾಲದಲ್ಲಿ ಮಾಡಬಾರದು ಎಂದಿಲ್ಲ.

### ಮೊದಲ ಉದಾಹರಣೆ —

ಶ್ರಾದ್ಧಕ್ಕೆ ಮುಖ್ಯಕಾಲ ಕುತಪಕಾಲ. ಅಂದರೆ ಸೂರ್ಯೋದಯವಾಗಿ ಐದೂವರೆ ಗಂಟೆಗಳ ನಂತರ (337ನೇ ನಿಮಿಷಕ್ಕೆ) ಕುತಪಕಾಲ

ಆರಂಭವಾಗುತ್ತದೆ.  ಆದರೆ ದ್ವಾದಶಿಯಂದು ನಾವು ಸೂರ್ಯೋದಯವಾಗುತ್ತಿದ್ದಂತೇ ಪಿಂಡಪ್ರದಾನವನ್ನು ಮಾಡುತ್ತೇವೆ. ಕಾರಣ ದ್ವಾದಶಿಯ ನಿಯಮ ಶ್ರಾದ್ಧದ ನಿಯಮಕ್ಕಿಂತಲೂ ಪ್ರಬಲವಾದದ್ದು ಎಂದು. ಅಲ್ಲಿ ಮುಖ್ಯಕಾಲವನ್ನು ತ್ಯಜಿಸಿ ಗೌಣಕಾಲದಲ್ಲಿ ಶ್ರಾದ್ಧ ಮಾಡುತ್ತೇವೆ. ಮತ್ತು ಏಕಾದಶಿಯ ಶ್ರಾದ್ಧವನ್ನೂ ದ್ವಾದಶಿಯಂದೇ ಮಾಡುತ್ತೇವೆ. ಅದಂತೂ ಮಹತ್ತರ ಉದಾಹರಣೆ.

## ಎರಡನೆಯ ಉದಾಹರಣೆ —

ಕೃಷ್ಣಾಷ್ಟಮಿಯನ್ನು ಆಚರಿಸಬೇಕಾದರೆ ಶ್ರಾವಣ ಕೃಷ್ಣ ಅಷ್ಟಮಿ ಅರ್ಧರಾತ್ರವ್ಯಾಪಿನಿಯಾಗಿರಬೇಕು. ಅದು ದೊರೆಯದೇ ಇದ್ದರೆ ರಾತ್ರಿವ್ಯಾಪಿನಿಯಾದರೂ ಆಗಿರಬೇಕು. ಅದೂ ದೊರೆಯದೆ ಇದ್ದರೆ ಪ್ರದೋಷವ್ಯಾಪಿನಿಯಾದರೂ ಆಗಿರಬೇಕು ಎಂಬ ವಚನವಿದೆ — ಕಾರ್ಯಾಷ್ಟಮ್ಯಸ್ತಗಾಮಿನೀ.

ಕಳೆದ ವರ್ಷ ದುರ್ಮುಖಸಂವತ್ಸರದಲ್ಲಿ ಶ್ರಾವಣ ಕೃಷ್ಣಾಷ್ಟಮಿ ರಾತ್ರಿ ಹತ್ತೂವರೆಯ ವೇಳೆಗೇ ಮುಗಿದು ಹೋಗಿತ್ತು. ಚಂದ್ರೋದಯವಿದ್ದದ್ದು ರಾತ್ರಿ ಹನ್ನೆರಡೂವರೆಗೆ. ನಾವೆಲ್ಲರೂ ಆ ರಾತ್ರಿಯಲ್ಲಿಯೇ ಕೃಷ್ಣಾಷ್ಟಮಿ ಆಚರಿಸಿದೆವು.

ಅಂದರೆ ಕೃಷ್ಣಾಷ್ಟಮಿಗೆ ಮುಖ್ಯವಾದದ್ದು. ಅರ್ಧರಾತ್ರವ್ಯಾಪಿನಿಯಾದ ಅಷ್ಟಮಿ.  ಅದು ದೊರೆಯದೇ ಇದ್ದಾಗ ಸೂರ್ಯಾಸ್ತವ್ಯಾಪಿನಿಯಾದ ಅಷ್ಟಮಿಯನ್ನು ಗ್ರಹಣ ಮಾಡಿದ್ದೇವೆ.

ಈಗಲೂ ನಾಗಚತುರ್ಥಿಗೆ ಮುಖ್ಯಕಾಲ ಮಧ್ಯಾಹ್ನವ್ಯಾಪಿನಿಯಾದ ಚತುರ್ಥಿ. ಮಧ್ಯಾಹ್ನವ್ಯಾಪಿನಿಯಾದ ಚತುರ್ಥಿ 26ನೆಯ ತಾರೀಕು ಇದ್ದರೂ ಅದಕ್ಕೆ ತೃತೀಯಾವೇಧ ಎಂಬ ದೋಷ ಇರುವದರಿಂದ ಅದನ್ನು ತ್ಯಾಗ ಮಾಡುತ್ತೇವೆ. ಹೆಂಡದ ಹನಿ ಇರುವ ಪಂಚಗವ್ಯ ಅಥವಾ ಗಂಗೆಯ ಕಲಶವನ್ನು ತ್ಯಜಿಸುವಂತೆ.

27ನೆಯ ತಾರೀಕು ಮಧ್ಯಾಹ್ನವ್ಯಾಪಿನಿ ಚತುರ್ಥಿ ಇಲ್ಲದಿದ್ದರೂ, ಬೋಧಾಯನರ ವಚನದಂತೆ

ಇಂತಹ ಸಂದರ್ಭದಲ್ಲಿ ಸೂರ್ಯೋದಯದಲ್ಲಿ ಸ್ವಲ್ಪವ್ಯಾಪಿನಿಯಾದ ಚತುರ್ಥಿಯನ್ನೂ ಗ್ರಹಿಸಬಹುದು. ಈ ಸಂದರ್ಭದಲ್ಲಿ ಸೂರ್ಯೋದಯದ ನಂತರ ಒಟ್ಟು ನಾಲ್ಕು ಮುಹೂರ್ತಗಳು ಚತುರ್ಥಿ ಇದೆ.

ಹೀಗಾಗಿ 27ನೆಯ ತಾರೀಕಿನಂದೇ ಚತುರ್ಥಿಯನ್ನು ಆಚರಿಸಬೇಕು.

26ನೆಯ ತಾರಿಕಿನಲ್ಲಿನ ಚತುರ್ಥಿ ಹೆಂಡದಿಂದ ಕೂಡಿದ ಪಂಚಗವ್ಯ-ಗಂಗೆಗಳಂತೆ ನಿಷಿದ್ಧ.

27ನೆಯ ತಾರೀಕು ಮುಖ್ಯಕಾಲದಲ್ಲಿ ಚತುರ್ಥಿ ಇಲ್ಲವಷ್ಟೇ ಹೊರತು, ದೋಷವಿಲ್ಲ. ಸೂರ್ಯೋದಯವ್ಯಾಪಿತ್ವ ಮತ್ತು ಪಂಚಮೀವೇಧ ಎಂಬ ಗುಣಗಳಿವೆ.

28ನೆಯ ತಾರೀಕು ನಾಗರಪಂಚಮೀ ಆಚರಣೆ. ಅಲ್ಲಿ ವಿವಾದವಿಲ್ಲ. ಅಂದೇ ಋಗ್ವೇದಿಗಳಿಗೆ ನಿತ್ಯ ಮತ್ತು ನೂತನ ಉಪಾಕರ್ಮ[5].

---

[5] ಉಪಾಕರ್ಮದ ಕುರಿತ ವಿಸ್ತೃತ ಚರ್ಚೆಯನ್ನು VNA218ರಲ್ಲಿ ವಿವರಿಸಿದ್ದೇನೆ.

ನಾಗರಪಂಚಮಿಯ ಆಚರಣೆಯ ಕುರಿತು VNA102ರಲ್ಲಿ ವಿವರಿಸಿದ್ದೇನೆ.

ಮತ್ತೇನಾದರೂ ಸಂಶಯಗಳಿದ್ದಲ್ಲಿ ಇದರ ಕಾಮೆಂಟುಬಾಕ್ಸಿನಲ್ಲಿ ಪ್ರಶ್ನೆಗಳನ್ನು ಕೇಳಿ. ಗುರುಸ್ಮರಣಪೂರ್ವಕವಾಗಿ ಉತ್ತರಿಸಲು ಪ್ರಯತ್ನಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ